# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1386 |
| 2 | ಸದಸ್ಯರ ಹೆಸರು | : | ಶ್ರೀ ಕೆ.ಎಸ್ ನವೀನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | : | 20/03/2025 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ವರ್ಗಾವಣೆಯಾಗದೇ ಒಂದೇ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇನ್ಸ್‌ಪೆಕ್ಟರ್‌ಗಳ ಸಂಖ್ಯೆ ಎಷ್ಟು; (ಇನ್ಸ್‌ಪೆಕ್ಟರ್ ಹಾಗೂ ಠಾಣೆಗಳ ಜಿಲ್ಲಾವಾರು ವಿವರ ಒದಗಿಸುವುದು) | ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ವರ್ಗಾವಣೆಯಾಗದೇ ಒಂದೇ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇನ್ಸ್‌ಪೆಕ್ಟರ್‌ಗಳ ಸಂಖ್ಯೆ 07<br><br>ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ) | ಸದರಿ ಇನ್ಸ್‌ಪೆಕ್ಟರ್‌ಗಳನ್ನು ವರ್ಗಾವಣೆ ಮಾಡದೆ ಇರಲು ಕಾರಣವೇನು; (ವಿವರ ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ: ಒಇ 60 ಪೊಸಿಇ 2009; ದಿನಾಂಕ: 24.08.2009 ರಂತೆ ಪೊಲೀಸ್ ಸಿಬ್ಬಂದಿ ಮಂಡಳಿಯನ್ನು ರಚಿಸಲಾಗಿದ್ದು, ಸದರಿ ಮಂಡಳಿಯ ತೀರ್ಮಾನದಂತೆ ಪೊಲೀಸ್ ಇನ್ಸ್‌ಪೆಕ್ಟರ್‌ಗಳ ವರ್ಗಾವಣೆಯನ್ನು ಕೈಗೊಳ್ಳಲಾಗುತ್ತದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಎಲ್ 09 ಶಾಸನ 2024; ದಿನಾಂಕ: 07.03.2024 ರಲ್ಲಿ ಕಾರ್ಯಕಾರಿ ಹುದ್ದೆಗಳಲ್ಲಿ ಕನಿಷ್ಟ ಎರಡು ವರ್ಷ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ ಗರಿಷ್ಟ ಅವಧಿ ನಿಗಧಿಪಡಿಸಿರುವುದಿಲ್ಲ. |
| ಇ) | ಇನ್ಸ್‌ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಲು ಯಾವ ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ? (ವಿವರ ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ: ಒಇ 60 ಪೊಸಿಇ 2009 ದಿನಾಂಕ: 24.08.2009 ರಂತೆ ಪೊಲೀಸ್ ಸಿಬ್ಬಂದಿ ಮಂಡಳಿಯನ್ನು ರಚಿಸಲಾಗಿರುತ್ತದೆ.<br><br>ಪೊಲೀಸ್ ಇನ್ಸ್‌ಪೆಕ್ಟರ್‌ರವರ ಸೇವೆ / ಅರ್ಹತೆ /ಕೋರಿಕೆ ಅಲ್ಲದೆ ಸದರಿಯವರ ಠಾಣಾ ವ್ಯಾಪ್ತಿಯಲ್ಲಿನ ಕಾನೂನು ಸುವ್ಯವಸ್ಥೆಯ ಸಮರ್ಪಕವಾದ ಕಾರ್ಯನಿರ್ವಹಣೆ ಹಾಗೂ ರಿಕ್ತಸ್ಥಾನಗಳ ಅನುಸಾರ ಕರ್ನಾಟಕ ಪೊಲೀಸ್ ಕಾಯ್ದೆ, 1963 ರ ಸೆಕ್ಷನ್ 20 ಎಫ್ ರಲ್ಲಿನ ಮಾರ್ಗಸೂಚಿಗಳನ್ವಯ ಪೊಲೀಸ್ ಸಿಬ್ಬಂದಿ ಮಂಡಳಿಯ ತೀರ್ಮಾನದಂತೆ ಪೊಲೀಸ್ ಇನ್ಸ್‌ಪೆಕ್ಟರ್‌ಗಳ ವರ್ಗಾವಣೆಯನ್ನು ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಒಇ 42 ಪಿಇಎಂ 2025

**(ಡಾ: ಜಿ ಪರಮೇಶ್ವರ)**
ಗೃಹ ಸಚಿವರು

<u>ಅನುಬಂಧ</u>

| ಕ್ರಸಂ | ಹೆಸರು | ಜಿಲ್ಲೆ | ಠಾಣೆ/ವೃತ್ತ | ದಿನಾಂಕದಿಂದ | ಷರಾ |
|---|---|---|---|---|---|
| 1. | ನಾಗರಾಜ್ ಎಂ ಕಮ್ಮಾರ್ | ವಿಜಯನಗರ ಜಿಲ್ಲೆ | ಹರಪ್ಪನಹಳ್ಳಿ ವೃತ್ತ | 12.02.2021 | ಲೋಕಸಭಾ ಚುನಾವಣೆ-2024 ರ ಸಂಬಂಧ ದಿನಾಂಕ:14.02.2024 ರಿಂದ 10.06.2024 ರವರೆಗೆ ರಾಯಚೂರು ಗ್ರಾಮಾಂತರ ವೃತ್ತ, ರಾಯಚೂರು ಜಿಲ್ಲೆಗೆ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗಿರುತ್ತದೆ. |
| 2. | ಲಕ್ಷ್ಮೀಪತಿ ಆರ್ ಎಲ್ | ಶಿವಮೊಗ್ಗ ಜಿಲ್ಲೆ | ಹೊಳೆಹೊನ್ನೂರು ಪೊ.ಠಾಣೆ | 04.06.2021 | ಲೋಕಸಭಾ ಚುನಾವಣೆ-2024 ರ ಸಂಬಂಧ ದಿನಾಂಕ:14.02.2024 ರಿಂದ 10.06.2024 ರವರೆಗೆ ಹಿರೆಕೆರೂರು ವೃತ್ತ, ಹಾವೇರಿ ಜಿಲ್ಲೆಗೆ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗಿರುತ್ತದೆ. |
| 3. | ನಾಗರಾಜ್ ಹೆಚ್ ಇ | ದಕ್ಷಿಣ ಕನ್ನಡ ಜಿಲ್ಲೆ | ವಿಟ್ಲಾ ಪೊ.ಠಾಣೆ | 02.07.2021 | -- |
| 4. | ಭಾರತಿ ಜಿ | ಮಂಗಳೂರು ನಗರ | ಊರ್ವ ಪೊ.ಠಾಣೆ | 03.07.2021 | -- |
| 5. | ಪ್ರದೀಪ್ ಬಿ ಆರ್ | ಹಾಸನ ಜಿಲ್ಲೆ | ಹೊಳೆನರಸೀಪುರ ವೃತ್ತ | 13.07.2021 | ಲೋಕಸಭಾ ಚುನಾವಣೆ-2024 ರ ಸಂಬಂಧ ದಿನಾಂಕ:08.02.2024 ರಿಂದ 10.06.2024 ರವರೆಗೆ ಹಿರೆಕೆರೂರು ವೃತ್ತ, ಹಾವೇರಿ ಜಿಲ್ಲೆ ಹಾಗೂ ಕರ್ನಾಟಕ ವಿಧಾನ ಸಭೆ ಚುನಾವಣೆ-2023 ರ ಸಂಬಂಧ ದಿನಾಂಕ:01.02.2023 ರಿಂದ 02.06.2023 ರವರೆಗೆ ವಿಜಯನಗರ ಪೊಲೀಸ್ ಠಾಣೆ, ಮೈಸೂರು ಜಿಲ್ಲೆಗಳಿಗೆ ಚುನಾವಣಾ ಕರ್ತವ್ಯಗಳಿಗೆ ನಿಯೋಜಿಸಲಾಗಿರುತ್ತದೆ. |
| 6. | ರಾಜಶೇಖರಯ್ಯ ಎಲ್ | ಶಿವಮೊಗ್ಗ ಜಿಲ್ಲೆ | ಸೊರಬ ವೃತ್ತ | 16.10.2021 | ಲೋಕಸಭಾ ಚುನಾವಣೆ-2024 ರ ಸಂಬಂಧ ದಿನಾಂಕ:14.02.2024 ರಿಂದ 26.06.2024 ರವರೆಗೆ ತಳಕು ವೃತ್ತ, ಚಿತ್ರದುರ್ಗ ಜಿಲ್ಲೆ ಹಾಗೂ ಕರ್ನಾಟಕ ವಿಧಾನ ಸಭೆ ಚುನಾವಣೆ-2023 ರ ಸಂಬಂಧ ದಿನಾಂಕ:01.02.2023 ರಿಂದ 02.06.2023 ರವರೆಗೆ ಆಜಾದ್‌ನಗರ ವೃತ್ತ, ದಾವಣಗೆರೆ ಜಿಲ್ಲೆಗಳಿಗೆ ಚುನಾವಣಾ ಕರ್ತವ್ಯಗಳಿಗೆ ನಿಯೋಜಿಸಲಾಗಿರುತ್ತದೆ. |
| 7. | ಈರಸಂಗಪ್ಪ ಆರ್ ಪಟ್ಟಣಶೆಟ್ಟಿ | ಬೆಳಗಾವಿ ಜಿಲ್ಲೆ | ರಾಮದುರ್ಗ ವೃತ್ತ | 03.11.2021 | -- |